ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಬೆಂಗಳೂರು-23.**

**ಸಂಖ್ಯೆಇಪಕೋ/ವಿ(2)/08/2022-23** **ದಿನಾಂಕ: 14 .06.2022**

**ಸುತ್ತೋಲೆ**

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ ಅಧೀಕ್ಷಕರು ದರ್ಜೆ-1 ರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 106 ಸೇನಿಸೆ 2021, ದಿನಾಂಕ: 10.12.2021
2. ಸರ್ಕಾರದ ಪತ್ರ ಸಂಖ್ಯೆ: ಅಕುಕ 309 ಹೆಚ್‌ಎಸ್‌ಎಂ 2021, ದಿನಾಂಕ: 07.09.2021.

***************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಶುಶ್ರೂಷಕ ಅಧೀಕ್ಷಕರು ದರ್ಜೆ-1 ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಜೇಷ್ಠತಾ ಪಟ್ಟಿಯಲ್ಲಿ ನಿವೃತ್ತಿ/ಸ್ವ-ಇಚ್ಛಾ ನಿವೃತ್ತಿ/ನಿಧನ/ಪದೋನ್ನತಿ ಹೊಂದಿರುವ ಹೆಸರುಗಳನ್ನು ಪರಿಶೀಲಿಸಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 10 ರನುಸಾರ ಹಾಗೂ ಉಲ್ಲೇಖ(1) ರ ಸರ್ಕಾರದ ಆದೇಶದನ್ವಯ ಪ್ರತಿ ವರ್ಷ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುವುದರಿಂದ ಅನುಭಂದ-01 ರಲ್ಲಿ ಶುಶ್ರೂಷಕ ಅಧೀಕ್ಷಕರು ದರ್ಜೆ-1 ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 31.05.2022 ರಲ್ಲಿದ್ದಂತೆ ಪ್ರಕಟಿಸಿ ಇಲಾಖೆಯ ವೆಬ್‌ಸೈಟ್ https://karunadu.karnataka.gov.in/hfw ನಲ್ಲಿ ಪ್ರಚುರಪಡಿಸಲಾಗಿದೆ.

ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು/ನಿಯಂತ್ರಣಾಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸದರಿ ಜೇಷ್ಠತಾ ಪಟ್ಟಿಯನ್ನು ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆಯ ಅಧಿಕಾರಿಗಳ/ನೌಕರರ ಗಮನಕ್ಕೆ ತಂದು ಕಡ್ಡಾಯವಾಗಿ ಶುಶ್ರೂಷಕ ಅಧೀಕ್ಷಕರು ದರ್ಜೆ-1 ಸಹಿ ಪಡೆದುಕೊಳ್ಳತಕ್ಕದ್ದು.

ಶುಶ್ರೂಷಕ ಅಧೀಕ್ಷಕರು ದರ್ಜೆ-1 ಜೇಷ್ಠತಾ ಪಟ್ಟಿಯಲ್ಲಿ ನೀಡಲಾದ ಸ್ಥಾನ, ಸೇವಾವಿವರ ಮುಂತಾದವುಗಳ ಬಗ್ಗೆ ಹಾಗೂ ನೌಕರರ ಹೆಸರು, ಪ.ಜಾ/ಪ.ಪಂ. ಹುಟ್ಟಿದ ದಿನಾಂಕ, ಕರ್ತವ್ಯಕ್ಕೆ ಸೇರಿದ ದಿನಾಂಕ, ಪದೋನ್ನತಿ ದಿನಾಂಕ ಬಿಟ್ಟು ಹೋಗಿದ್ದಲ್ಲಿ, ಸೇವಾಪುಸ್ತಕವನ್ನು ಪರಿಶೀಲಿಸಿ ಇತರೆ ಮಾಹಿತಿಯ ಬಗ್ಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಪಟ್ಟ ನೌಕರರುಗಳ ಎಲ್ಲಾ ಮಾಹಿತಿಗಳನ್ನು ದೃಢೀಕರಿಸಿ ಮೇಲಾಧಿಕಾರಿಗಳ ಮೂಲಕ ಈ ಕೆಳಕಂಡ ನಮೂನೆಗಳಲ್ಲಿ ಭರ್ತಿಮಾಡಿ ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ: 30/06/2022 ರೊಳಗೆ ಈ ಕಛೇರಿಗೆ ಮುದ್ದಾಂ ಅಥವಾ ಇ-ಮೇಲ್ (dhspromotioncell@gmail.com) ನಿಗಧಿತ ಅವಧಿಯ ಒಳಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಸೂಚಿಸಿದೆ.

**ನಮೂನೆ-1**

| ಕ್ರ. ಸಂ. | ಕೆ.ಜಿ.ಐ.ಡಿ ಸಂಖ್ಯೆ | ಜೇಷ್ಠತಾ ಪಟ್ಟಿ ಸಂಖ್ಯೆ | ನೌಕರರ ಹೆಸರು ಹಾಗೂ ಹಾಲಿ ಕಾರ್ಯನಿರತ ಸ್ಥಳ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಶುಶ್ರೂಷಕ ಅಧೀಕ್ಷಕರು ದರ್ಜೆ-1 ಹುದ್ದೆಗೆ ಪದೋನ್ನತಿ ಪಡೆದ ದಿನಾಂಕ | ಜಾತಿ ಪ್ರಮಾಣ ಪತ್ರ |
|---|---|---|---|---|---|---|---|
| | | | | | | | |

ಸಂಬಂಧಪಟ್ಟ ನೌಕರರಿಂದ ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಲಹೆ/ಆಕ್ಷೇಪಣೆಗಳೇನಾದರು ಇದ್ದಲ್ಲಿ ಪೂರಕ ದಾಖಲೆಯೊಂದಿಗೆ ತಪ್ಪದೆ ಕಡ್ಡಾಯವಾಗಿ ದೃಢೀಕರಣದ ಪ್ರತಿಗಳನ್ನು ನೀಡಿರುವ ಕಾಲಾವಕಾಶದ ಒಳಗೆ ಸಲ್ಲಿಸಲು ಸೂಚಿಸಿದೆ. ತಡವಾಗಿ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ತದನಂತರ ನಿಗಧಿತ ಅವಧಿಯೊಳಗೆ ಬಂದ ಆಕ್ಷೇಪಣೆಗಳು ಅಥವಾ ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ ಪರಿಶೀಲಿಸಿ ನಿಯಮಾನುಸಾರ ಶುಶ್ರೂಷಕ ಅಧೀಕ್ಷಕರು ದರ್ಜೆ-1 ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುತ್ತದೆ.

14/6/22

**ನಿರ್ದೇಶಕರು,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**
**ಬೆಂಗಳೂರು.**

**ವಿಶೇಷ ಸೂಚನೆ:–**

1) ಅಂತರ್ಜಾಲದಲ್ಲಿ ಪ್ರಕಟಿಸಲಾಗುತ್ತಿರುವ ಶುಶ್ರೂಷಕ ಅಧೀಕ್ಷಕರು ದರ್ಜೆ–1 ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇಲಾಖೆಯ ಸಂಬಂಧಪಟ್ಟ ನೌಕರರು ತಮ್ಮ ವೈಯಕ್ತಿಕ ಜವಾಬ್ದಾರಿಯೊಂದಿಗೆ ಕಡ್ಡಾಯವಾಗಿ ತಮ್ಮ ಜೇಷ್ಠತಾ ಸಂಖ್ಯೆಯನ್ನು ಪರಿಶೀಲಿಸಿಕೊಳ್ಳತಕ್ಕದ್ದು ಹಾಗೂ ನ್ಯೂನ್ಯತೆ/ ಆಕ್ಷೇಪಣೆಗಳಿದ್ದಲ್ಲಿ ನಮೂನೆ–1 ರಂತೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸುವುದು.

2) ಅಂತಿಮ ಜೇಷ್ಠತಾ ಪಟ್ಟಿ/ಪದೋನ್ನತಿ ನೀಡಿದ ನಂತರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದೆ ಅಥವಾ ಪದೋನ್ನತಿಯಿಂದ ವಂಚಿತರಾಗಿದ್ದವೆಂದು ಸಲ್ಲಿಸುವ ಯಾವುದೇ ಮನವಿಗಳನ್ನು ಮಾಡಲು, ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ, ಅಂತಹ ಪ್ರಕರಣಗಳನ್ನು ಇಲಾಖೆಯಿಂದಲೇ ಏಕಪಕ್ಷೀಯವಾಗಿ ತಿರಸ್ಕರಿಸಲಾಗುವುದು.

3) ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರತಿಯನ್ನು ಇಲಾಖೆಯ ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ಅಧಿಕಾರಿಗಳು, ನಿರ್ದೇಶಕರು ಹಾಗೂ ಡೀನ್, ಸ್ವಾಯತ್ತ ಸಂಸ್ಥೆ, ಜಿಲ್ಲಾ ಶಸ್ತ್ರ ಚಿಕಿತ್ಸಕರು,/ವೈದ್ಯಕೀಯ ಅಧೀಕ್ಷಕರು, ಪ್ರಾಂಶುಪಾಲರು, ಆಕುಕ ತರಬೇತಿ ಕೇಂದ್ರ, ಅಧಿಕಾರಿ ವರ್ಗದವರು ಕಡ್ಡಾಯವಾಗಿ ಪರಿಶೀಲಿಸಿ, ಎಲ್ಲಾ ಸಂಬಂಧಪಟ್ಟ ನೌಕರರ ಗಮನಕ್ಕೆ ತಂದು ಸಹಿ ಮಾಡಿಸಿಕೊಳ್ಳತಕ್ಕದ್ದು.

4) ನೌಕರರ ಗಮನಕ್ಕೆ ತರದೇ ನ್ಯಾಯಾಲಯದ ಪ್ರಕರಣ, ದೂರುಗಳ ದಾಖಲಾದಲ್ಲಿ ಸಂಬಂಧಪಟ್ಟ ಅಧಿಕಾರಿ ವರ್ಗದವರನ್ನು ನೇರ ಹೊಣೆಗಾರರನ್ನಾಗಿಸಿ, ನಿಯಮಾನುಸಾರ ವಿಧಿಸಲಾಗುವ ದಂಡ ಅಥವಾ ಶಿಕ್ಷೆಗೆ ಗುರಿಪಡಿಸಲಾಗುವುದು.

5) ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕದ ಅಂಕಣಗಳು ಖಾಲಿ ಇದ್ದಲ್ಲಿ ಪರಿಶೀಲಿಸಿ ಮಾಹಿತಿ ಒದಗಿಸುವುದು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ:–**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು–560001.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು–560023.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು–560009 (ತಮ್ಮ ಅಧೀನದ ಎಲ್ಲಾ ಸ್ವಾಯುತ್ತ ಸಂಸ್ಥೆಗಳಿಗೆ ಕಳುಹಿಸಲು ತಿಳಿಸಲಾಗಿದೆ)
4. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಬೆಂಗಳೂರು (ತಮ್ಮ ಅಧೀನದ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಕಳುಹಿಸಲಾಗಿದೆ)
5. ಅಪರ ನಿರ್ದೇಶಕರು, ಉತ್ತರ ಕರ್ನಾಟಕ ವಿಭಾಗ, ವಿಜಯಪುರ ಜಿಲ್ಲೆ.
6. ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರು, ಬಿ.ಬಿ.ಎಂ.ಪಿ/ಬೆಂಗಳೂರು ವಿಭಾಗ/ಮೈಸೂರು ವಿಭಾಗ/ಬೆಳಗಾವಿ ವಿಭಾಗ/ಕಲಬುರಗಿ ವಿಭಾಗ ಇವರ ಗಮನಕ್ಕೆ ತರುವುದೇನೆಂದರೆ, ನಿಮ್ಮ ಅಧೀನದ ಎಲ್ಲಾ ಅಧಿಕಾರಿಗಳ ಗಮನಕ್ಕೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಾಗೂ ಈ ಸುತ್ತೋಲೆಯನ್ನು ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಹಾಗೂ ಸಂಬಂಧಪಟ್ಟ ನೌಕರರಿಗೆ ತಿಳಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.
7. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಅಂತರ್ಜಾಲದಲ್ಲಿ ಪ್ರಕಟಿಸಿರುವ ಈ ಸುತ್ತೋಲೆಯನ್ನು ತಮ್ಮ ಆದೀನದ ಎಲ್ಲಾ ಆಸ್ಪತ್ರೆ/ಕಛೇರಿಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಿದೆ.
8. ನಿರ್ದೇಶಕರು ಹಾಗೂ ಡೀನ್, ಬೆಂಗಳೂರು/ಮೈಸೂರು/ಮಂಡ್ಯ/ಬಳ್ಳಾರಿ/ಬೆಳಗಾವಿ/ರಾಯಚೂರು/ಹುಬ್ಬಳ್ಳಿ/ಹಾಸನ/ಬೀದರ್/ಕಾರವಾರ /ಚಾಮರಾಜನಗರ/ಗದಗ/ಕಲಬುರಗಿ/ಕೊಪ್ಪಳ/ಚಿಕ್ಕಬಳ್ಳಾಪುರ/ಇತರೆ ಸ್ವಾಯುತ್ತ ಸಂಸ್ಥೆಗಳು........................... ಜಿಲ್ಲೆ.
9. ನಿರ್ದೇಶಕರು, ಅಟಲ್ ಬಿಹಾರಿ ವಾಜಪೇಯ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
10. ವೈದ್ಯಕೀಯ ಅಧೀಕ್ಷಕರು, ಜಯನಗರ/ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ/ಕೆ.ಸಿ.ಜನರಲ್ ಆಸ್ಪತ್ರೆ. ಬೆಂಗಳೂರು.
11. ಎಲ್ಲಾ ಪ್ರಾಂಶುಪಾಲರು, ಎ.ಎನ್.ಎಂ ತರಬೇತಿಕೇಂದ್ರ,........................................ ಜಿಲ್ಲೆ.
12. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು,....................................................
13. ಎಲ್ಲಾ ಜಿಲ್ಲಾ ಮಲೇರಿಯಾಧಿಕಾರಿಗಳು / ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು................................................
14. ಎಲ್ಲಾ ಮುಖ್ಯ ಆಡಳಿತಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ,
15. ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ...............................................................
16. ಇಲಾಖೆಯ ಎಲ್ಲಾ ಶುಶ್ರೂಷಕ ಅಧೀಕ್ಷಕರು ದರ್ಜೆ–1.
17. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
18. ಆದೇಶ ಪ್ರತಿ/ ಕಛೇರಿ ಪ್ರತಿ.

ಆರೋಗ್ಯ ಮತ್ತು ಕು.ಕ.ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ ಅಧೀಕ್ಷಕರು ದರ್ಜೆ-1 ವೃಂದದ
ದಿನಾಂಕ: 31-05-2022 ರಲ್ಲಿದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಅನುಭಂದ-01

| ಕ್ರ.ಸಂ | ಅಧಿಕಾರಿ/ಸಿಬ್ಬಂದಿಯ ಹೆಸರು | ಪ್ರವರ್ಗ | ನೇರ ನೇಮಕಾತಿ/ಮುಂಬಡ್ತಿ/ಇತರೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಷರಾ |
|---|---|---|---|---|---|---|---|
| 1 | ಈಶ್ವರೀಬಾಯಿ | ಪ.ಜಾ | ಪದೋನ್ನತಿ | 24.06.1962 | 24.11.1984 | 28.07.2020 | |
| 2 | ಚಂಪಾಬಾಯಿ | ಪ.ಜಾ | ಪದೋನ್ನತಿ | 08.08.1962 | 19.12.1985 | 28.07.2020 | |
| 3 | ಹೆಚ್ ಅನ್ನಪೂರ್ಣ | ಪ.ಜಾ | ಪದೋನ್ನತಿ | 12.08.1963 | 01.01.1986 | 28.07.2020 | |
| 4 | ಆಶಾ ಕಾಂಬ್ಳೆ | ಪ.ಜಾ | ಪದೋನ್ನತಿ | 17.11.1962 | 11.01.1986 | 28.07.2020 | |
| 5 | ಪಿ ಸುಮತಿ | ಪ.ಜಾ | ಪದೋನ್ನತಿ | 20.10.1962 | 24.09.1986 | 28.07.2020 | |
| 6 | ಕೆ ರಾಜೇಶ್ವರಿ | ಪ.ಜಾ | ಪದೋನ್ನತಿ | 15.05.1963 | 24.09.1986 | 28.07.2020 | |
| 7 | ಮಲ್ಲಮ್ಮ | ಪ.ಜಾ | ಪದೋನ್ನತಿ | 20.07.1967 | 19.11.1992 | 28.07.2020 | |
| 8 | ಸರಸ್ವತಿ | ಪ.ಜಾ | ಪದೋನ್ನತಿ | 01.06.1968 | 19.11.1992 | 28.07.2020 | |
| 9 | ಹೆಚ್ ಶಾಂತಮ್ಮ | ಪ.ಜಾ | ಪದೋನ್ನತಿ | 18.05.1969 | 25.11.1992 | 28.07.2020 | |
| 10 | ವೀಣಾ | ಪ.ಜಾ | ಪದೋನ್ನತಿ | 06.01.1968 | 03.01.1992 | 28.07.2020 | |
| 11 | ವಿದ್ಯಾವತಿ | ಪ.ಜಾ | ಪದೋನ್ನತಿ | 06.01.1968 | 03.01.1992 | 28.07.2020 | |

H.J. Somathi 14/6/22
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು